# ನಿರ್ದೇಶನದ ಮಜಲಿನಲ್ಲಿ ಎಸ್ತರ್ ನರೋನ್ಹಾ

**ಬಹುಭಾಷಾ ನಟಿ ಎಸ್ತರ್ ನರೋನ್ಹಾ, ನಿರ್ದೇಶನದಲ್ಲಿ ತಮ್ಮ ಸಾಮರ್ಥ್ಯ ಪರೀಕ್ಷೆಗೆ ಸಜ್ಜಾಗಿದ್ದಾರೆ. 'ದಿ ವೇಕಂಟ್ ಹೌಸ್' ಸಿನಿಮಾ ಮೂಲಕ ನಿರ್ದೇಶಕಿಯಾಗಿರುವ ಅವರು, ಸಿನಿಮಾರಂಗದಲ್ಲಿ ತಮಗಿರುವ ಆಕಾಂಕ್ಷೆಗಳ ಬಗ್ಗೆ ಮಾತನಾಡಿದ್ದಾರೆ.**

■ **ಸುಮಲತಾ ಎನ್**



ಹಿಂದಿ, ಕನ್ನಡ, ತಮಿಳು, ತೆಲುಗು, ತುಳು, ಕೊಂಕಣಿ, ಮರಾಠಿ ಭಾಷೆಗಳ ಸುಮಾರು ನಲವತ್ತು ಸಿನಿಮಾಗಳಲ್ಲಿ ನಟಿಸಿರುವ ನಟಿ ಎಸ್ತರ್ ನರೋನ್ಹಾ, ಇದೀಗ ನಿರ್ದೇಶನದ ಹೊಸ ಮಜಲಿನಲ್ಲಿದ್ದಾರೆ. ಕನ್ನಡ ಹಾಗೂ ಕೊಂಕಣಿ ಭಾಷೆಗಳಲ್ಲಿ 'ದಿ ವೇಕಂಟ್ ಹೌಸ್' ಎಂಬ ಸಿನಿಮಾ ನಿರ್ದೇಶನ ಮಾಡುತ್ತಿದ್ದು, ಈ ಸಿನಿಮಾ ತಮ್ಮ ಕಲಾಕೌಶಲಕ್ಕೆ ಕನ್ನಡಿ ಹಿಡಿಯಲಿದೆ ಎಂಬ ಭರವಸೆ ಅವರದ್ದು.

ಮಂಗಳೂರು ಮೂಲದ ಎಸ್ತರ್, ಸಂಗೀತ, ನೃತ್ಯ ಕಲೆಯಲ್ಲಿ ಪಳಗಿದವರು. ಮುಂಬೈನ ಅನುಪಮ್ ಖೇರ್ ನಟನಾ ಶಾಲೆಯಲ್ಲಿ ನಟನೆಯ ಭಿನ್ನ ಆಯಾಮಗಳನ್ನು ಕಲಿತವರು. ಹಲವು ವರ್ಷಗಳಿಂದ ಸಿನಿಮಾರಂಗದಲ್ಲಿ ಸಕ್ರಿಯವಾಗಿದ್ದು, ಬೋಲ್ಡ್ ನಟನೆಗೆ ಸೈ ಎನ್ನಿಸಿಕೊಂಡವರು.

ಉಸಿರಿಗಿಂತ ನೀನೇ ಹತ್ತಿರ, ನಾವಿಕ, ಅತಿರಥ, ನುಗ್ಗೇಕಾಯಿ, ಲೋಕಲ್ ಟ್ರೇನ್, ಲಂಕೆ ಇತ್ಯಾದಿ ಕನ್ನಡ ಸಿನಿಮಾಗಳಲ್ಲಿ ನಟಿಸಿರುವ ಅವರು, ಇದೀಗ ಕನ್ನಡ ಭಾಷೆಯಲ್ಲೇ ಸಿನಿಮಾ ನಿರ್ದೇಶನ ಮಾಡುತ್ತಿದ್ದಾರೆ.

ಎಸ್ತರ್ ಮಾತುಗಾರಿಕೆ, ನಿರೂಪಣಾ ಶೈಲಿ ಕಂಡ ಹಲವು ನಿರ್ದೇಶಕರು, 'ನೀವು ತುಂಬಾ ಚೆನ್ನಾಗಿ ಸ್ಟೋರಿ ನರೇಟ್ ಮಾಡ್ತೀರ. ನೀವ್ಯಾಕೆ ನಿರ್ದೇಶನಕ್ಕೆ ಬರಬಾರದು' ಎಂದು ನೀಡಿದ್ದ ಸಲಹೆ ಲಾಕ್‌ಡೌನ್ ಸಮಯದಲ್ಲಿ ಕಾರ್ಯರೂಪಕ್ಕೆ ಇಳಿಯಿತು.

'ಸಿನಿಮಾದಲ್ಲಿ ನಟಿಸುತ್ತಿದ್ದರೂ ಸಿನಿಮಾಗೆ ಸಂಬಂಧಿಸಿದ ಹಲವು ವಿಷಯಗಳಲ್ಲಿ ಆಸಕ್ತಿಯಿತ್ತು. ಎಲ್ಲಾ ಕೆಲಸವನ್ನೂ ಗಮನಿಸುತ್ತಿದ್ದೆ. ಎರಡನೇ ಲಾಕ್‌ಡೌನ್ ವೇಳೆ ಸಮಯ ಸಿಕ್ಕಿತು. ಏನಾದರೂ ಮಾಡೋಣ ಎಂದು ಹೊರಟ ನನ್ನ ಕಣ್ಣ ಮುಂದೆ ಬಂದದ್ದು ನಿರ್ದೇಶನ. ಕಥೆ ಬರೆಯಲು ಆರಂಭಿಸಿ ದೃಶ್ಯ ಕಟ್ಟುತ್ತಾ ಹೋದೆ. ಅದನ್ನು ಅಮ್ಮನಿಗೆ ತೋರಿಸಿದೆ. ಅವರೂ ಹುರಿದುಂಬಿಸಿದರು...' ಕಥೆ ಹುಟ್ಟಿಕೊಂಡ ಬಗೆಯನ್ನು ಖುಷಿಯಿಂದ ವಿವರಿಸಿದರು ಎಸ್ತರ್.

ನಿರ್ದೇಶನದೊಂದಿಗೆ ಚಿತ್ರಕಥೆ, ಸಂಗೀತ, ನಟನೆ, ನಿರ್ಮಾಣ... ಎಲ್ಲ ಜವಾಬ್ದಾರಿ ಹೊತ್ತಿರುವ ಎಸ್ತರ್ ಅವರ ವೃತ್ತಿಬದುಕಿನಲ್ಲಿ ಈ ಸಿನಿಮಾ ತುಂಬಾ ಮುಖ್ಯ. ಅವರ ಚೊಚ್ಚಿಲ ಪ್ರಯತ್ನಕ್ಕೆ ಎಲ್ಲರ ಬೆಂಬಲ ಜೊತೆಯಾಗಿದೆ. ಕೆಲವೇ ದಿನಗಳಲ್ಲಿ ಸಿನಿಮಾ ಬಿಡುಗಡೆ ಸಿದ್ಧತೆ ನಡೆದಿದೆ.

'ಲಾಕ್‌ಡೌನ್ ಸಮಯದಲ್ಲೇ, ನನಗೇ ಗೊತ್ತಿಲ್ಲದೆ ಸಿನಿಮಾಗೆ ಗ್ರೌಂಡ್ ವರ್ಕ್ ರೂಪುಗೊಂಡಿತ್ತು. ಈಗ ನಿಂತು, ನಾ ಬಂದ ದಾರಿ ತಿರುಗಿ ನೋಡಿದರೆ ಅಚ್ಚರಿಯೆನಿಸುತ್ತದೆ. ಮೊದಲ ಸಿನಿಮಾ ಅತ್ಯುತ್ತಮ ಅನುಭವ ನೀಡಿದೆ. ನಿರ್ದೇಶಕಿಯಾಗಿ ಕೆಲವು ವಿಷಯಗಳಲ್ಲಿ ಹೊಸ ಪಾಠ ಕಲಿತೆ' ಎಂದು ನಗುತ್ತಾರೆ. ನಿರ್ದೇಶನದಲ್ಲಿ ಮಹಿಳೆಯರು ಅವಕಾಶ ಸೃಷ್ಟಿಸಿಕೊಳ್ಳಬೇಕಾದ ಅಗತ್ಯವನ್ನೂ ಒತ್ತಿ ಹೇಳುತ್ತಾರೆ ಅವರು.

'ಹೆಣ್ಣು ಮಕ್ಕಳು ತಮ್ಮನ್ನು ತಾವು ಕಂಡುಕೊಳ್ಳಬೇಕಾದ ಇನ್ನೊಂದಷ್ಟು ಕ್ಷೇತ್ರಗಳಿವೆ. ನಾವು ಹೇಳುವುದೂ ಬಹಳಷ್ಟಿದೆ. ಸಿನಿಮಾರಂಗದಲ್ಲಿ ಇದುವರೆಗೆ ಪುರುಷರ ದೃಷ್ಟಿಯಲ್ಲಿನ ಮಹಿಳೆಯರನ್ನು ಕಂಡಿದ್ದೇವೆ. ಹೀರೊಯಿನ್ ಎಂದರೆ ಹೀಗೇ ಇರಬೇಕು ಎಂದು ಅವರು ತೋರಿದ್ದಾರೆ. ಆದರೆ ಮಹಿಳೆಯ ದೃಷ್ಟಿಯಲ್ಲಿ ಹೀರೊಯಿನ್ ಎಂದರೆ ಯಾರು ಎಂದು ತೋರಬೇಕಿದೆ. ಹೆಣ್ಣಿನ ಬಗ್ಗೆ ಹೆಣ್ಣಿಂದ ಮಾತ್ರ ಹೇಳಲು ಸಾಧ್ಯವಿರುವ ಕಥೆಗಳನ್ನು ಹೇಳಬೇಕಿದೆ. ಅಂಥ ಕಥೆಗಳನ್ನು ಕೆದಕಬೇಕು. ಅವಕಾಶ ಸಿಕ್ಕರೆ ನಟಿಯಾಗಿ, ನಿರ್ದೇಶಕಿಯಾಗಿ ಆ ಕೆಲಸ ಮಾಡುತ್ತೇನೆ' ಎಂದು ಆಕಾಂಕ್ಷೆಗಳನ್ನು ಬಿಚ್ಚಿಡುತ್ತಾರೆ.

ಕನ್ನಡದಲ್ಲಿ ಮೂರು ಸಿನಿಮಾಗಳಲ್ಲಿ ತೊಡಗಿಕೊಂಡಿದ್ದಾರೆ ಎಸ್ತರ್. ತೆಲುಗು, ತಮಿಳು ಸಿನಿಮಾಗಳ ಶೂಟಿಂಗ್ ನಡೆಯುತ್ತಿದ್ದು, ತಮ್ಮ ಚೊಚ್ಚಿಲ ನಿರ್ದೇಶನದ ಸಿನಿಮಾ ಬಗ್ಗೆ ಕುತೂಹಲ ತುಂಬಿಕೊಂಡಿದ್ದಾರೆ. ■